ಅಧಿಕಾರದಲ್ಲಿದ್ದಾಗ ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆ ಬೆಳೆಯಬೇಕೆಂಬ ಉದ್ದೇಶದಿಂದ ಒಳ್ಳೆಯ ಯೋಜನೆ ಹಮ್ಮಿಕೊಂಡು, ತಾಲ್ಲೂಕುಗಳಲ್ಲಿ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಿತ್ತು. ಈಗ ಆ ತಾಲ್ಲೂಕು ಕೈಗಾರಿಕಾ ಕೇಂದ್ರಗಳನ್ನು ರದ್ದುಗೊಳಿಸುವ ಮೂಲಕ ದೊಡ್ಡ ತೊಂದರೆಯುಂಟು ಮಾಡಿದ್ದೀರಿ. ಕೈಗಾರಿಕೆಗಳು ಮುಚ್ಚಿಹೋಯಿತು. ಇದರ ಪರಿಣಾಮವಾಗಿ, ವ್ಯವಸಾಯ ಮಾಡುವವನು ವ್ಯವಸಾಯ ಮಾಡುತ್ತಾ ಆತ ಹಾಗೆಯೇ ಸಾಯುತ್ತಿರಬೇಕು, ಆತನಿಗೆ ಬೇರಾವುದೇ ಉದ್ಯೋಗ ಸೃಷ್ಟಿಯಾಗಬಾರದೆಂದು ಮಾಡಿದರೆ ಸುಧಾರಣೆಯಾಗುತ್ತದೆಯೇ? ಸುಧಾರಣೆ ಎಂದರೆ, ಯಾವುದನ್ನು ಮಾಡಬೇಕು, ಯಾವುದನ್ನು ಬಿಡಬೇಕೆನ್ನುವ ವಿವೇಚನೆ ಇಲ್ಲದೆ ಮಾಡಿರುವುದರಿಂದ ಸಮಸ್ಯೆಯುಂಟಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಒಬ್ಬರೇ ಇಂಜಿನಿಯರ್ ಇರಬೇಕೆಂಬುದು ನನ್ನ ವಾದವಲ್ಲ. ಆದರೆ, ಅಂದಿನಿಂದ ಇಂದಿನವರೆಗೆ ಒಂದು ನುರು ಪಟ್ಟು ಜಾಸ್ತಿ ಮಾಡಿದ್ದೀರಿ. ಜನಸಂಖ್ಯೆ ಆಧಾರದ ಮೇಲೆ ಜಾಸ್ತಿ ಮಾಡಿ, ನನ್ನ ಅಭ್ಯಂತರಯೆನೂ ಇಲ್ಲ. ನೀವು ಒಂದಕ್ಕೆ ನೂರು ಪಟ್ಟು ಜಾಸ್ತಿ ಮಾಡಿದ್ದೀರಿ. ಅದನ್ನು ಕಡಿಮೆಗೊಳಿಸುವುದೇ ಸುಧಾರಣೆ. ನೀವು ವರದಿಯನ್ನು ಸುಮ್ಮನೆ ಇಟ್ಟುಕೊಂಡಿರುವುದಾದರೆ, ಇಲ್ಲವೇ ವರದಿಯನ್ನು ತಿರಸ್ಕರಿಸಿದ್ದೇವೆ, ವರದಿಯಲ್ಲಿರುವಂತೆ ಅನುಷ್ಠಾನಗೊಳಿಸಲು ಸಾಧ್ಯವಾಗುವುದಿಲ್ಲವೆಂದು, ಅದನ್ನಾದರೂ ಹೇಳಿ,

ಅಧ್ಯಕ್ಷರು : ಪ್ರಶ್ನೋತ್ತರ ಮುಗಿಯಿತು.

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಪೊಲೀಸ್ ಅಧಿಕಾರಿಯೊಬ್ಬರು ಶಾಸಕರಿಗೆ ಅಗೌರವ ತೋರಿಸಿ ಹಕ್ಕುಚ್ಯುತಿ ಎಸಗಿರುವ ಕುರಿತು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಒಂದು ಹಕ್ಕುಚ್ಯುತಿಗೆ ಸಂಬಂಧಿಸಿದಂತೆ ನಾಣು, ಮಾನ್ಯ ಸದಸ್ಯರುಗಳಾದ ಜೆ.ಸಿ. ಮಾಧುಸ್ವಾಮಿ, ವಾಟಾಳ್ ನಾಗರಾಜ್ ಹಾಗೂ ಇತರರೆತ್ಲರೂ ತಮ್ಮ ಕೊಠಡಿಗೆ ಬಂದು ತಮ್ಮೊಂದಿಗೆ ಚರ್ಚಿಸಿದ್ದೇವೆ. ಹಕ್ಕುಚ್ಯುತಿಗೆ ಸಂಬಂಧಿಸಿದಂತೆ ಏನು ವಿಷಯ ಮಂಡಿಸುತ್ತಿದ್ದೇವೆ, ಇದರ ಉದ್ದೇಶವೇನೆಂದರೆ, ಇತ್ತೀಚೆಗೆ ನಮ್ಮ ಶಾಸಕರುಗಳೊಂದಿಗೆ ಕೆಲವು ಅಧಿಕಾರಿಗಳು ಅದರಲ್ಲೂ ವಿಶೇಷವಾಗಿ ಪೊಲೀಸ್ ಆದಿಕಾರಿಗಳ ವರ್ತನೆ ಹದ್ದುಮೀರಿದೆ. ಇವೊತ್ತು ಮಾನ್ಯ ಶಾಸಕರಾಗಿರುವ ಕಳಷಪ್ಪ ಗುರುಶಾಂತಪ್ಪ ಬಂಡಿಯವರಿಗೆ ಏನಾಯಿತು? ಯಾವುದೋ ಲಾರಿಯನ್ನು ಒಬ್ಬ ಪೋಲೀಸ್ ಅಧಿಕಾರಿ ತಡೆದಾಗ, ಲಾರಿಯವನು ಬಂದು ಸದರಿ ಶಾಸಕರ ಬಳಿ ವಿಷಯ ನಿವೇದಿಸಿದಾಗ, ಶಾಸಕರು ಲಾರಿ ತಡೆದ ಪೊಲೀಸ್ ಅಧಿಕಾರಿಯನ್ನು ಉದ್ದೇಶಿಸಿ, 'ಏಕೆ ಕಿರುಕುಳ ಕೊಡುತ್ತೀರಿ ಎಂದು ಕೇಳಿದ್ದಕ್ಕೆ ಪ್ರತಿಯಾಗಿ ಆ ಪೊಲೀಸ್ ಅಧಿಕಾರಿ, 'ನೀನ್ಯಾರು ಕೇಳೋದಿಕ್ಕೆ? ಹುಷಾರಾಗಿರು!' ಎಂದು ಹೇಳಿದ್ದಾರೆ, ಅವರು ಏನು ಹೇಳಿದ್ದಾನೆಂದರೆ, "ದಿನಾಂಕ 6.7.04ರಂದು ರೋಣ ಸರ್ಕಲ್ ಇನ್ಸ್‌ಪೆಕ್ಟರ್‌ರವರು ಅಮರೇಶ್ ಬಾರ್ಕೆರವರು ರಾತ್ರಿ ಲಾರಿಯೊಂದನ್ನು ತಡೆದು ಅವರಿಗೆ ಅನಗತ್ಯವಾಗಿ ಕಿರುಕುಳ ನೀಡುತ್ತಿದ್ದಾಗ, ಅವರು ನನ್ನನ್ನು ಸಂಪರ್ಕಿಸಿ ವಿಷಯ ತಿಳಿಸಿದಾಗ ನಾಣು ಕೂಡಲೇ ಅವರೊಂದಿಗೆ ಫೋನ್‌ನಲ್ಲಿ ಮಾತನಾಡಿ, ಏಕೆ ಜನರಿಗೆ ಕಿರುಕುಳ ಕೊಡುತ್ತಿದ್ದೀರಿ ಎಂದು ಕೇಲಿದ್ದಕ್ಕೆ ಅದನ್ನು ಕೇಳಲು ನೀನ್ಯಾರು ಎಂದು ನನ್ನನ್ನು ಏಕವಚನದಲ್ಲಿ ದಬಾಯಿಸಿ, ನೀವೇನು ಮಾಡುತ್ತೀರೋ ಮಾಡಿ, ನಾನು ಯಾರಿಗೂ ಹೆದರುವುದಿಲ್ಲ, ನನಗೂ ರಾಜಕೀಯ

ವ್ಯಕ್ತಿಗಳ ಬೆಂಬಲವಿದೆ, ನೀನು ಬದುಕಿರಬೇಕೆಂದರೆ ಹುಷಾರಾಗಿರು, ಎಂದು ಅವಾಚ್ಯ ಶಬ್ದಗಳಲ್ಲಿ ಬೈದರು". ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಈ ರೀತಿ ಹೇಳುತ್ತಾನೆಂದರೆ, ಇದು ಯಾರೋ ಒಬ್ಬ ಶಾಸಕರ ಪ್ರಶ್ನೆಯಲ್ಲ, ಆತ ಲಾರಿ ಹಿಡಿದಿರುವುದು ಸರಿ ಇರಬಹುದು. ಜನಪ್ರತಿನಿಧಿಗಳಾಗಿರುವ ನಮ್ಮನ್ನು ಇವೊತ್ತು ಯಾರಾದರೂ ಸಂಪರ್ಕಿಸಿದಾಗ, ಅವರ ತೊಂದರೆ ಆಲಿಸಿ ಸಂಬಂಧಪಟ್ಟವರಿಗೆ, 'ಏನಪ್ಪಾ, ಏಕೆ ಕಿರುಕುಳ ಕೊಡುತ್ತಿದ್ದೀಯಾ ಎಂದು ಕೇಳಿದರೆ, ಅದಕ್ಕೆ ಪ್ರತಿಯಾಗಿ 'ನೀನ್ಯಾರೋ ಮಾತನಾಡುವುದಕ್ಕೆ?' ಎನ್ನುವುದಾದರೆ, ನಿಮಗೆ ಗೊತ್ತಿರುವಂತೆ ಹಿಂದೆ ಚಿಕ್ಕಮಗಳೂರಿನಲ್ಲಿ ಅತ್ಯಂತ ಪ್ರಾಮಾಣಿಕರಾಗಿದ್ದ ಒಬ್ಬ ಡಿ.ಸಿ.ಯವರು ವಿಧಾನ ಪರಿಷತ್ ಸದಸ್ಯರೊಂದಿಗೆ ಸರಿಯಾಗಿ ವರ್ತಿಸಲಿಲ್ಲವೆನ್ನುವ ಕಾರಣಕ್ಕಾಗಿ ಅವರನ್ನು ಸದನಕ್ಕೆ ಕರೆಸುವ ಮೂಲಕ ಅವರಿಗೆ ವಾಗ್ದಂಡನೆ ಕೊಡುವ ಸಂದರ್ಭ ಬಂತು. ನಾನು ಹೇಳುವುದೇನೆಂದರೆ, ಈ ಹಕ್ಕುಚ್ಯುತಿ ನಿರ್ಣಯವನ್ನು ಹಕ್ಕುಬಾಧ್ಯತಾ ಸಮಿತಿಗೆ ರೆಫರ್ ಮಾಡುವುದು ಮಾತ್ರವಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಸದನಕ್ಕೆ ಬರುತ್ತಿದ್ದಾರೆ. ನಿನ್ನೆ ಸದನದಲ್ಲಿ ಇದರ ಬಗ್ಗೆ ಆ ಕಡೆ, ಈ ಕಡೆಯ ಯಾರೇ ಸದಸ್ಯರಿರಬಹುದು, ಎಲ್ಲರೂ ಪ್ರಸ್ತಾಪಿಸಿದರು. ಆದರೆ, ಅಧಿಕಾರಿಗಳಾದವರು ಯಾರೊಂದಿಗಾದರೂ ಅಗೌರವದಿಂದ ನಡೆದುಕೊಳ್ಳಬಹುದು. ಜೀರ್ಣಮಾಡಿಕೊಳ್ಳಬಹುದು ಎನ್ನುವ ವಾತಾವರಣ ಏನಿದೆ, ಇದನ್ನು ಕೊನೆಗೊಳಿಸದಿದ್ದರೆ, ಶಾಸಕರೊಂದಿಗೆ ಅಗೌರವದಿಂದ ವರ್ತಿಸಿರುವ ಪೊಲೀಸ್ ಅಧಿಕಾರಿಗೆ ನೀವು ವಾರ್ನ್ ಮಾಡದಿದ್ದರೆ, ಇಲ್ಲಿ ಹೇಳುವವರು ಕೇಳುವವರು ಇದ್ದಾರೆನ್ನುವ ಭಯ ಅವರಿಗೆ ಬರದಿದ್ದರೆ ಚುನಾಯಿತ ಪ್ರತಿನಿಧಿಗಳಾದ ನಾವು ಗೌರವದಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ.

†ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಶಾಸಕರುಗಳು ಬಂದಾಗ ಅವರನ್ನು ಯುವ ರೀತಿ ಕಾಣಬೇಕೆಂಬ ಬಗ್ಗೆ ದಿವಂಗತ ಸನ್ಮಾನ್ಯ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಒಂದು ಸೂತ್ರವನ್ನು ಅಳವಡಿಸಿದ್ದರು. ಇತ್ತೀಚಿನ ದಿನಗಳಲ್ಲಿ ಶಾಸಕರೊಂದಿಗೆ ಅಧಿಕಾರಿಗಳು ಕರ್ತವ್ಯ ನಿರ್ವಹಿಸದಿರುವಂತಹ ಘೋರ ಪರಿಸ್ಥಿತಿ ನಿರ್ಮಾಣವಾಗಿದೆ. ಇವೊತ್ತು ರೋಣ ಕ್ಷೇತ್ರದ ಶಾಸಕರಿಗೆ ತೋರಿಸಿರುವ ಅಗೌರವಕ್ಕೆ ಇಡೀ ಸದನ ನಿಜವಾಗಿಯೂ ತಲೆತಗ್ಗಿಸಬೇಕಾದ ಪರಿಸ್ಥಿತಿ ಬಂದಿದೆ. ಇದು ಒಬ್ಬ ಶಾಸಕ ತಾನು ನಿರ್ವಹಿಸುವ ಕರ್ತವ್ಯದ ಮೇಲೆ ಬಹಳ ಕೆಟ್ಟ ಪರಿಣಾಮ ಬೀರುತ್ತದೆ. ಆ ಸರ್ಕಲ್ ಇನ್ಸ್‌ಪೆಕ್ಟರ್‌ರವರ ಧೋರಣೆ ಹಾಗೂ ಅವರು ಶಾಸಕರೊಂದಿಗೆ ಅಮಾನುಷವಾಗಿ ಸ್ಪಂದಿಸಿರುವ ರೀತಿ–ನೀತಿ ಗಮನಿಸಿದಾಗ ಒಂದು ರೀತಿಯಲ್ಲಿ ಭಯೋತ್ಪಾದನೆಯುಂಟು ಮಾಡುವ ಮೂಲಕ ಶಾಸಕರು ಅಲ್ಲಿ ಕೆಲಸ ಮಾಡಬಾರದೆಂದು ಅವರನ್ನು ಹೆದರಿಸಿ, ಬೀದಿಯಲ್ಲಿ ಓಡಾಡಬಾರದೆಂದು ಅವರಿಗೆ ಬೆದರಿಕೆ ಹಾಕಿದ್ದಾರೆ. ತಾವು ಇದನ್ನು ಹಕ್ಕುಚ್ಯುತಿ ಸಮಿತಿಗೆ ವಿಚಾರಣೆಗಾಗಿ ಕಳುಹಿಸಿಕೊಡಬೇಕು. ಇದು ಹಕ್ಕುಚ್ಯುತಿ ನೇರವಾಗಿ ಆಗುತ್ತದೆ. ಅದರಲ್ಲಿ ಬೇರೆ ಪ್ರಶ್ನೆ ಇಲ್ಲವೇ ಇಲ್ಲ ಎಂಬ ಮಾತನ್ನು ತಮ್ಮ ಮೂಲಕ ತಿಳಿಸುತ್ತಿದ್ದೇನೆ, ಸರ್ಕಾರದ ಗಮನಕ್ಕೂ ತರುತ್ತಿದ್ದೇನೆ. ಅತ್ಯಂತ ಅನ್ಯಾಯ, ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಶಾಸಕರ ಮೇಲೆ ನಡೆಸಿರತಕ್ಕ ಆ ದೌರ್ಜನ್ಯದ ಮಾತುಗಳು, ಬೆದರಿಕೆಗಳು, ಭಯೋತ್ಪಾದನೆ, ಇದು ನಿಜಕ್ಕೂ ಒಳ್ಳೆಯ ಸೂಚನೆಯೇನಲ್ಲ, ಕರ್ನಾಟಕದಲ್ಲೇ ತಾವು ಅಧಿಕಾರಿಗಳ ಬಗ್ಗೆ ಅನೇಕ ವಿಚಾರಗಳನ್ನು ಅನೇಕ ಸಾರಿ ಮಾತನಾಡಿದ್ದೀರಿ, ಈ ಸಂದರ್ಭದಲ್ಲಿ ಇಡೀ ಸದನದಲ್ಲಿ, ಇದು ಪಕ್ಷಾತೀತವಾಗಿ ಹೇಳುತ್ತಿದ್ದೇನೆ, ಅನೇಕ ಶಾಸಕರುಗಳಿಗೆ

ಇದರ ಅನುಭವವಾಗಿದೆ, ಅನೇಕ ಕ್ಷೇತ್ರದಲ್ಲಿ ಅನುಭವವಾಗಿದೆ, ಕೆಲವು ಕಡೆ ಜಿಲ್ಲಾಧಿಕಾರಿಯವರು ಕೆಲವು ಕಡೆ ಎ.ಸಿ. ಗಳು ಅನೇಕ ಅಧಿಕಾರಿಗಳು ಶಾಸಕರ ಮೇಲೆ ದೌರ್ಜನ್ಯ ಮಾಡತಕ್ಕದ್ದು ದರ್ಪ ಮಾಡತಕ್ಕದ್ದು, ನಡೆಯುತ್ತಿವೆ. ಇದನ್ನು ಪೊಲೀಸ್ ರಾಜ್ಯ ಮಿಲಿಟರಿ ಆಡಳಿತವೆಂದು ತಿಳಿದುಕೊಂಡಿದ್ದಾರೆ, ಆ ರೀತಿ ನಡೆಯುತ್ತಿದ್ದಾರೆ, ಇದು ಹೋಗಬೇಕು. ಆ ದೃಷ್ಟಿಯಿಂದ ಸರ್ಕಾರದ ಮೂಲಕ ಒಂದು ಸಂದೇಶ ಎಲ್ಲಾ ಅಧಿಕಾರಿಗಳಿಗೆ ತಲುಪಬೇಕು. ಶಾಸಕರು ಎಂದರೆ ಏನು? ಚುನಾಯಿತ ಪ್ರತಿನಿಧಿಗಳಿಗೆ ಎಷ್ಟು ಗೌರವವಿರಬೇಕು? ಶಾಸಕ ತನ್ನ ಕೆಲಸ ಮಾಡಲು ಎಷ್ಟು ಸ್ವಾತಂತ್ರ್ಯವಿರಬೇಕು? ಅದಕ್ಕೆ ಯಾವುದೇ ಅಡೆತಡೆ ಇಲ್ಲದಿರುವ ವ್ಯವಸ್ಥೆ ನಿರ್ಮಾಣ ಆಗಬೇಕಾಗಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರ ಮೂಲಕ ಈ ಸದನದ ಶಾಸಕರ ಗೌರವವನ್ನು ಉಳಿಸಬೇಕು. ಅವರ ಕರ್ತವ್ಯಕ್ಕೆ ಚ್ಯುತಿಯಾಗದಿರುವ ರೀತಿ ಅನುಕೂಲವಾಗತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಶಾಸನ ಸಭೆಯ ಸದಸ್ಯರು ಎಂದಮೇಲೆ ಓಟನ್ನು ಹಾಕಿದವರು ನಮ್ಮಿಂದ ಏನಾದರೂ ನಿರೀಕ್ಷೆ ಮಾಡುತ್ತಾರೆ. ಒಬ್ಬ ಪೊಲೀಸ್ ಅಧಿಕಾರಿ ರಸ್ತೆಯಲ್ಲಿ ನಿಂತು ಯಾರನ್ನೂ ಹೆರಾಸ್ ಮಾಡುವಾಗ ಏತಕ್ಕಪ್ಪಾ ಮಾಡುತ್ತೀಯ ಎಂದರೆ ಜನರ ಎದುರಿಗೇ ನೀನ್ಯಾರೋ ಹೋಗೋಲೇ ಎಂಬ ಮಾತುಗಳನ್ನು ಆಡುವ ಸ್ಥಿತಿಗೆ ಬಂದರೆ ನಾವು ಎಂ.ಎಲ್.ಎ. ಗಳಾಗಿ ಏತಕ್ಕೆ ಇರಬೇಕು ಅಥವಾ ಏನಾದರೂ ಯಾರನ್ನಾದರೂ ಏತಕ್ಕೆ ಕೇಳಬೇಕು? ಇಲ್ಲಿ ಎಲ್ಲರದ್ದೂ ಗೌರವದ ಪ್ರಶ್ನೆ ಇದೆ. ರೋಣಾದ ಶಾಸಕರಿಗೆ ಆ ರೀತಿಯಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ಆ ರೀತಿ ಯಾರಿಗೆ ಆಗಿದೆಯೋ ಅವರೇ ಹೇಳುತ್ತಿಲ್ಲವಲ್ಲಾ? ಅವರ ಕಡೆಯಿಂದ ಹೇಳಿಸಿ. ಆಗಿರುವುದು ಸತ್ಯವಾಗಿದೆ ಎಂಬ ಬಗ್ಗೆ ಸಂಬಂಧಪಟ್ಟ ಶಾಸಕರಿಂದಲೇ ಹೇಳಿಸಿ. ದಯಮಾಡಿ ಅವರು ಹೇಳಲಿ. ಅವರನ್ನು ಮಾತನಾಡಲು ಬಿಡುತ್ತಿಲ್ಲವಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದೂ ಸರಿಯಲ್ಲ. ಆದ್ದರಿಂದ ಇದನ್ನು ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡಿ, ಅವರನ್ನು ಕರೆಸೋಣ, ಅವರನ್ನು ವಾರ್ನ್ ಮಾಡಿ ಈ ರೀತಿ ಏನು ಮಾಡಿದ್ದೀರಿ, ಮುಂದೆ ಈ ರೀತಿ ಮಾಡಬೇಡಿ ಎಂದರೆ ಉಳಿದವರಿಗಾದರೂ ಮಾರ್ಗದರ್ಶನವಾಗುತ್ತದೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಹಕ್ಕುಚ್ಯುತಿ ನಿರ್ಣಯ ಸಮಿತಿಗೆ ಅದನ್ನೇನೂ ರೆಫರ್ ಮಾಡುವುದು ಬೇಡ. ಶಾಸಕರ ಜೊತೆ ಯಾವುದೇ ಅಧಿಕಾರಿ ಗೌರವದಿಂದ ನಡೆದುಕೊಳ್ಳಬೇಕು. ಅದರ ಬಗ್ಗೆ ಎರಡು ಮಾತಿಲ್ಲ. ಅಧಿಕಾರಿಗಳು ಶಾಸಕರ ಜೊತೆ ಹೇಗೆ ನಡೆದುಕೊಳ್ಳಬೇಕು, ಶಾಸಕರು ಅವರ ಕಛೇರಿಗೆ ಹೋದಾಗ ಹೇಗೆ ನಡೆದುಕೊಳ್ಳಬೇಕು ಎಂಬ ಬಗ್ಗೆ ಸರ್ಕಾರ ಆಗಿಂದಾಗ್ಗೆ ಅನೇಕ ಸುತ್ತೋಲೆಗಳನ್ನು ಹೊರಡಿಸಿದೆ. ಆದರೆ ಅವರೇನಾದರೂ ಉದ್ಧಟತನದಿಂದ ಬೇಜವಾಬ್ದಾರಿತನದಿಂದ, ದುರಹಂಕಾರದಿಂದ ನಡೆದುಕೊಂಡಿದ್ದಾರೆ ಅವರ ಮೇಲೆ ವಿಚಾರಣೆ ಮಾಡಿದ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳೋಣ. ಅದರ ಬಗ್ಗೆ ಯಾರೂ ಕೂಡ ಸಂಶಯವನ್ನು ಇಟ್ಟುಕೊಳ್ಳಬೇಕಾಗಿಲ್ಲ. ಹಾಗಿದ್ದಮೇಲೆ ಇದನ್ನೇಕೆ ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡಬೇಕು? It is a very simple matter. We are going to take action against him.

ಶ್ರೀ ಹೆಚ್.ಡಿ. ಬಸವರಾಜು : ಹಕ್ಕುಚ್ಯುತಿ ಏಕೆ ಬೇಕಾಗುತ್ತದೆಂದರೆ, ಈ ಪ್ರಕರಣಗಳು ಮತ್ತೆ ಈ ರಾಜ್ಯದಲ್ಲಿ ಮರುಕಳಿಸಬಾರದು ಎಂಬ ಉದ್ದೇಶದಿಂದ ಈ ಪ್ರಕರಣಕ್ಕೆ ಮಹತ್ವ ಕೊಡಿ.

ಶ್ರೀ ಸಿದ್ದರಾಮಯ್ಯ : ನಾನು ಇದನ್ನು ಒಪ್ಪುವುದಿಲ್ಲ ಯಾವುದೇ ಅಧಿಕಾರಿ ಶಾಸಕರ ಜೊತೆ ಅನುಚಿತವಾಗಿ ವರ್ತಿಸಿದರೆ, ಬೇಜವಾಬ್ದಾರಿಯಿಂದ ದುರಹಂಕಾರದಿಂದ ವರ್ತಿಸಿದರೆ ಜನಪ್ರತಿನಿಧಿಗಳಿಗೆ ಗೌರವ ಕೊಡಬೇಕಾದದ್ದು ಅವರ ಕರ್ತವ್ಯ. ಆದ್ದರಿಂದ ಅದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಅದು ತಪ್ಪು ಅದನ್ನು ಖಂಡಿಸಬೇಕಾಗುತ್ತದೆ. ಅದರ ಬಗ್ಗೆ ಬೇರೆ ಮಾತಿಲ್ಲ. ಅವರ ಬಗ್ಗೆ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಡಿ. ಬಸವರಾಜು : ಪ್ರತಿ ಸಲ ಈ ವಿಚಾರ ಬಂದಾಗ ಪ್ರಸ್ತಾಪ ಮಾಡಲು ಆಗುವುದಿಲ್ಲ. ಯಾರೋ ಒಬ್ಬರ ಮೇಲಾದರೂ ಕ್ರಮ ತೆಗೆದುಕೊಳ್ಳಬೇಕಲ್ಲಾ? ಅದರಿಂದ ಒಳ್ಳೆಯ ಸಂದೇಶ ಹೋಗುತ್ತದೆ.

Sri Siddaramaiah : We are going to take appropriate action against the concerned police officer.

ಅಧ್ಯಕ್ಷರು : ಮಾನ್ಯ ಬಸವರಾಜುವರವರೆ, ನಾನೂ ಇದರ ಬಗ್ಗೆ ಸರ್ಕಾರದಿಂದ ವರದಿಯನ್ನು ತರಿಸುತ್ತೇನೆ. ಹಕ್ಕುಚ್ಯುತಿ ಪ್ರಶ್ನೆ ಬಂದಾಗ ಮಾಡೋಣ, ವರದಿ ತರಿಸಿ ಏನು ಮಾಡಬೇಕೋ ನಿರ್ಧಾರ ತೆಗೆದುಕೊಳ್ಳುತ್ತೇನೆ.

Sri S. Rajendra : Including the police officer.

Sri Siddaramaiah : Yes, including the police officer.

ವಿಷಯ : 2: ಹೊಸಕೋಟೆ ರೈತ ಮುಖಂಡ ನಾರಾಯಣಸ್ವಾಮಿಯ ಕೊಲೆ ಕುರಿತು.

ಶ್ರೀ ವಾಟಾಳ್ ನಾಗರಾಜ್ : ಹೊಸಕೋಟೆಯ ರೈತ ಸಂಘದ ಮಾಜಿ ಅಧ್ಯಕ್ಷರಾದಂಥ ನಾರಾಯಣ ಸ್ವಾಮಿಯವರ ಕೊಲೆಯಾಗಿದೆ, ರಾಜಕಾರಣದ ಕೊಲೆಗಳು ಬಹುಶಃ ಎಲ್ಲಾ ಕಡೆ ರಾಜ್ಯದಲ್ಲಿ ತಾಲ್ಲೂಕಿನಲ್ಲಿ ಜಿಲ್ಲೆಗಳಲ್ಲಿ ನಡೆಯುತ್ತಿದೆ. ಇದಕ್ಕೆ ಎಲ್ಲಾದರು ಒಂದು ಕಡೆ ಕಾನೂನು ಸುವ್ಯವಸ್ಥೆ ಹದಗೆಟ್ಟರೆ ನಾರಾಯಣ ಸ್ವಾಮಿಯವರ ಕೊಲೆ ನಡೆದಿದ್ದರು, ಏಕೆ ಅವರ ಕೊಲೆಯಾಯಿತು? ನಮ್ಮ ಮಾಜಿ ಶಾಸಕರಾದ ಮಾನ್ಯ ಬಚ್ಚೇಗೌಡರ ಕ್ಷೇತ್ರವಾದ ಹೊಸಕೋಟೆ, ಅಲ್ಲಿನ ಚುನಾವಣೆ ವ್ಯವಸ್ತೆ ಇರಬಹುದು ಅಥವಾ ಚುನಾವಣೆ ಜಗಳಗಳು ಇರಬಹುದು ಏನೇ ಇರಬಹುದು, ರಾಜಕಾರಣವನ್ನು ಈ ಮಟ್ಟಕ್ಕೆ ತೆಗೆದುಕೊಂಡು ಹೋಗತಕ್ಕದ್ದು ಒಳ್ಳೆಯದಲ್ಲ. ನಾನು ತಮ್ಮ ಮೂಲಕ ಮಾನ್ಯ ಉಪಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತಿದ್ದೇನೆ. ಹೊಸಕೋಟೆಯಲ್ಲಿ ನಾರಾಯಣಗೌಡರ ಕೊಲೆ ಸುಮಾರು 25ನೇ ತಾರೀಖು ಆಯಿತು, ಬಹುಶಃ ರಾಜಕೀಯ ಕೊಲೆ, ಈ ರೀತಿ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ನಮ್ಮದು ಏನೇ ರಾಜಕೀಯವಿರಲಿ ಆದರೆ ಕೊಲೆ ಮಾಡತಕ್ಕ ಮಟ್ಟಕ್ಕೆ ಹೋದರೆ ಪರಿಸ್ಥಿತಿ ಏನು? ಇದು ಬಹಳ ಅತ್ಯಂತ ಗಂಭೀರವಾದ ಪರಿಸ್ಥಿತಿ, ಕೊಲೆ ಮಾಡಿರುವವರು ಯಾರು ಎಂದು ಗೊತ್ತಿದೆ, ಆದರೂ ಸರ್ಕಾರ ಇನ್ನು ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ ಯಾರು ಕೊಲೆ ಮಾಡಿದ್ದಾರೆ ಎಂಬ ಬಗ್ಗೆ ಪ್ರತಿಯೊಂದೂ ಗೊತ್ತಿದೆ, ಇಷ್ಟೆಲ್ಲಾ ಗೊತ್ತಿದ್ದರು ಸರ್ಕಾರ ಇದರ ಬಗ್ಗೆ ಪ್ರಾಮಾಣಿಕವಾದಂಥ ಪ್ರಯತ್ನ ಮಾಡಿಲ್ಲ. ತಮ್ಮ ಮೂಲಕ ಮಾನ್ಯ ಉಪಮುಖ್ಯಮಂತ್ರಿಯವರನ್ನು ಗಮನಸೆಳೆಯುತ್ತಿದ್ದೇನೆ, ಹೊಸಕೋಟೆಯ ನಾರಾಯಣಗೌಡರು ಎಂದು ಮಾಜಿ ರೈತ ಸಂಘದ ಅಧ್ಯಕ್ಷರು, ಜಾತ್ಯಾತೀತ ಜನತಾ ದಳದ